ತೆಗೆಯುವುದು ಎಂದರೆ ನಾನು ಮಾರು ದೂರ. ಆದರೆ ನನ್ನ ತಲೆಯ ಹೇನು ಎಲ್ಲಿ ಏಳು ಹಾಸಿಗೆ ದಾಟಿ ತಮ್ಮ ತಲೆಗೆ ಬಂದು ಬಿಡುತ್ತದೋ ಎಂದು ಹೆದರಿದ ನನ್ನ ದೊಡ್ಡಮ್ಮನ ಮಕ್ಕಳು ಅವರ ಅಮ್ಮನಲ್ಲಿ ಲಾಬಿ ಮಾಡಿ ನನ್ನನ್ನು ಈ ಸೀರು ತೆಗೆಯುವುದರಲ್ಲಿ ನಿಷ್ಣಾತ ಅಜ್ಜಿಯ ಬಳಿ ನನಗೆ ಗೊತ್ತಿಲ್ಲದ ಹಾಗೆ ಯಾವ ಸುಳಿವು ನೀಡದೆ ಉಪಾಯದಿಂದ ಕಳುಹಿಸಿ ಬಿಡುತ್ತಿದ್ದರು. ಆ ಅಜ್ಜಿಗೆ, ಸೀರಿಗೆ, ದೊಡ್ಡಮ್ಮನ ಮಕ್ಕಳಿಗೆ ಸಾವಿರ ಶಾಪ ಹಾಕಿಕೊಂಡು ಸೀರು ತೆಗೆಸಿಕೊಳ್ಳುತ್ತಿದ್ದೆ. 'ಅಯ್ಯೋ ಅಷ್ಟು ಸೀರು ತೆಗೆದ್ರಲ್ಲ ನಿನಗೆ ಅಯ್ಯಬ್ಬಾ ಅನಿಸಲಿಲ್ವಾ ಅಷ್ಟು ಸೀರು ಖಾಲಿ ಆಯ್ತಲ್ಲಾ' ಅಂತ ದೊಡ್ಡಮ್ಮನ ಮಕ್ಕಳ ಕುಹಕ ಬೇರೆ. ಅಯ್ಯಬ್ಬಾ ವಾ ನನಗೆ ಅಯ್ಯಯ್ಯಬ್ಬಾ ಆಗುತ್ತಿತ್ತು, ನಿಮಗೇನು ಗೊತ್ತು ಅಂತ ಮನಸ್ಸಿನಲ್ಲಿ ಹಿಡಿ ಶಾಪ ಹಾಕಿದರೂ ಎದುರಿಗೆ ತೋರಿಸುವ ಹಾಗಿಲ್ಲ. ಮರ್ಯಾದೆ ಪ್ರಶ್ನೆ. 'ತಲೆಯಲ್ಲಿ ಹೇನು ಸೀರು ತುಂಬಿಕೊಂಡಿದ್ದರೂ ತೆಗೆಸುವ ಆಲೋಚನೆ ಇಲ್ಲ. ಹೇನುಬುರುಕಿ' ಅಂತ ಮತ್ತೆ ಆಡಿಕೊಳ್ಳುತ್ತಾರೆ ಅನ್ನುವ ಭಯ. ಆದರೂ ಅದೆಷ್ಟು ತೆಗೆದರೂ ಅದೆಲ್ಲಿಂದ ವೃದ್ಧಿಯಾಗುತ್ತಿತ್ತೋ ಆ ಹೇನಿನ ಸಂಸಾರ ತಲೆಯಲ್ಲಿ ತಪ್ಪುತ್ತಲೇ ಇರಲಿಲ್ಲ.

ಈ ಹೇನಿಗೊಂದು ಯಾವುದೇ ಮನೆಮದ್ದು ಹಳ್ಳಿಮದ್ದು ಇಲ್ಲದೇ ಹೋಯಿತೇ ಭಗವಂತ. ಯಾರೋ ಯಾವುದೋ ಶಾಂಪು ಹೇಳಿದರು ಎಂದು ಅದನ್ನು ತಂದು ಹಾಕಿದೆ. ಸ್ವಲ್ಪ ದಿನ ಕಡಿಮೆ ಆಯಿತೇನೋ ಅನಿಸುವಷ್ಟರಲ್ಲಿ ಈ ಸೆಕೆಗೊ ಮಳೆಗೋ ಕೂದಲು ಒದ್ದೆಯಾಗಿ ಪುನಃ ಶುರುವಾಗುತ್ತಿತ್ತು.

ಕಾಲೇಜು ದಿನಗಳಲ್ಲಿ ಹೇಗೂ ಏನೂ ಇವು ಕಮ್ಮಿ ಆಗಿ ನಂತರ ಇಲ್ಲವೇ ಆಯಿತು. ವರುಷಗಳು ಉರುಳಿದವು. ಹೇನಿನ ಕಾಟದಿಂದ ಮುಕ್ತಿ ಹೊಂದಿದೆ. ನನ್ನ ತಲೇಲಿ ಇನ್ನು ಅದು ಕಾಲಿಡಲು ಸಾಧ್ಯವೇ ಇಲ್ಲ ಎಂಬ ಅತಿಯಾದ ಆತ್ಮವಿಶ್ವಾಸದಲ್ಲಿದ್ದೆ. ಆದರೆ ಅದೆಲ್ಲಿತ್ತೂ ನೋಡಿ ಇತ್ತೀಚೆಗೆ ಒಂದು ದಿನ ಬಾಚಣಿಗೆಯಲ್ಲಿ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗಬೇಕೆ. ಸರೀ ನೋಡಿದೆ ಕಣ್ಣು ಬಿಟ್ಟು ನೋಡಿದೆ, ಮತ್ತೆ ಮತ್ತೆ ನೋಡಿದೆ, ಬೆಳಕಿಗೆ ಬಂದು ನೋಡಿದೆ, ಬಾಚಣಿಗೆಯಿಂದ ಕೆಳಗೆ ಹಾಕಿ ಪುನಃ ಪುನಃ ಖಾತ್ರಿ ಮಾಡಿಕೊಂಡು ನೋಡಿದರೆ ಅದೇ ಕಪ್ಪು ಹೇನು. ಅವು ಮಗಳ ತಲೆಯಿಂದ ರವಾನೆ ಆಗಿದ್ದು ತಕ್ಷಣ ಗೊತ್ತಾಯಿತು. ಅವಳ ತಲೆಯಲ್ಲಿ ಎಲ್ಲಿಂದಪ್ಪಾ ಬಂತು ಎಂದು ನೋಡಿದರೆ ಅಣಕಿಸುತ್ತಿವೆ ತಲೆ ತುಂಬ ಮರಿ ಹೇನುಗಳು; ಎಲ್ಲೆಡೆ ಸೀರುಗಳ ಮಿನುಗುವ ನಕ್ಷತ್ರಗಳು!

## ಶ್ರೀವಿಭಾವನ

ಲೇಖಕಿ ಮೈಸೂರಿನಲ್ಲಿ ಸಂಶೋಧಕರಾಗಿದ್ದಾರೆ. ಬೆಂಗಳೂರಿನಲ್ಲಿರುವ 'ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳ ಅಧ್ಯಯನ ಸಂಸ್ಥೆ (ಐಸೆಕ್)', 'ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್ಆರ್)'ಗಳಲ್ಲಿ ಕೆಲಸ ಮಾಡಿದ್ದಾರೆ. ಕೆಲಕಾಲ ಪತ್ರಕರ್ತರಾಗಿದ್ದರು.